ಸಣ್ಣನೀರಾವರಿ ಇಲಾಖೆಯ ಅನುದಾನ

09 (30) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ರಾಜ್ಯದ ಯಾವ ಯಾವ ತಾಲ್ಲೂಕಿಗೆ ಯಾವ ಯಾವ ಉದ್ದೇಶಕ್ಕೆಂದು ಎಷ್ಟೆಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಕ್ಷೇತ್ರವಾರು ಅನುದಾನವನ್ನು ಒದಗಿಸಲು ಯಾವ ಮಾನದಂಡವನ್ನು ಅನುಸರಿಸಲಾಗಿದೆ;

ಇ) ಕಳೆದ ವರ್ಷದಲ್ಲಿ ಉಡುಪಿ ಜಿಲ್ಲೆಯಲ್ಲಿನ ಯಾವ ಯಾವ ಕ್ಷೇತ್ರದಲ್ಲಿ ಒದಗಿಸಿದ ಅನುದಾನದಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ (ವಿವರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ಪ್ರಸ್ತುತ ಸಾಲಿನಲ್ಲಿ ಒದಗಿಸಿರುವ ಅನುದಾನ ಹಂಚಿಕೆ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಆ) ಪ್ರತಿಯೊಂದು ಕ್ಷೇತ್ರದಲ್ಲಿ ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣಕ್ಕಾಗಿ ಅವುಗಳ ತಾಂತ್ರಿಕ ಹಾಗೂ ಆರ್ಥಿಕವಶ್ಯತೆಗೆ ಅನುಗುಣವಾಗಿ ಮತ್ತು ಅನುದಾನ ಲಭ್ಯತೆಗನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) 2010–11ನೇ ಸಾಲಿನಲ್ಲಿ ಕ್ಷೇತ್ರವಾರು ಖರ್ಚು ಮಾಡಿದ ಹಣದ ವಿವರ ಕೆಳಕಂಡಂತಿದೆ.

ಕ್ರ ಸಂ.	ಕ್ಷೇತ್ರಗಳು	ಒದಗಿಸಿದ ಅನುದಾನ	ಖರ್ಚು ಮಾಡಿದ ವಿವರ	ಷರಾ
1	ಕಾಮ	291.32	291.32	
2	ಉಡುಪಿ	190.57	190.57	
3	ಕುಂದಾಪುರ	213.18	213.18	
4	ಬೈಂದೂರು	216.29	216.29	
5	ಕಾರ್ಕಳ	250.72	250.72	